ಸಂಕೇತವಾಗಿದ್ದು, ಚಾಂದ್ರಮಾನ ನವ ವರ್ಷದಂತಹ ಸಂದರ್ಭಗಳಲ್ಲಿ ಇದನ್ನು ಉಡುಗೊರೆಯಾಗಿ ನೀಡುತ್ತಾರೆ. ಮನೆಯ ಮೇಜಿನ ಮೇಲೆ ಆಲಂಕಾರಿಕ ವಸ್ತುವಾಗಿಯೂ ಇಡುತ್ತಾರೆ. ಚೀನೀ ಕುಶಲಕರ್ಮಿಗಳು ಪಚ್ಚೆ ಹಾಗೂ ದಂತಗಳಿಂದ ಈ ಹಣ್ಣಿನ ಕೆತ್ತನೆ ಮಾಡುತ್ತಾರೆ. ಜಪಾನಿನಲ್ಲಿ ಸಣ್ಣ ಕುಂಡಗಳಲ್ಲಿ ಬೋನ್ಸಾಯ್ ಆಗಿಯೂ ಬೆಳೆಸುತ್ತಾರೆ.

ಸೂಪರ್ ಮಾರ್ಕೆಟ್ಟಿಗೆ ಹೋದಾಗ, ನನ್ನ ಅದೃಷ್ಟವೆಂಬಂತೆ ಈ ಹಣ್ಣು ನನ್ನ ಕಣ್ಣಿಗೆ ಬೀಳಬೇಕೇ? ಅದರ ಬಗ್ಗೆ ನನಗೆ ಅದೆಷ್ಟು ಕುತೂಹಲ ಉಂಟಾಗಿತ್ತೆಂದರೆ, ಹಿಂದುಮುಂದು ಯೋಚಿಸದೆ ಒಂದು ಹಣ್ಣು ಆರಿಸಿಕೊಂಡು ಸಾಮಾನಿನ ಗಾಡಿಯಲ್ಲಿ ಹಾಕೇಬಿಟ್ಟೆ. ಮಗಳು, ಇದನ್ನ ತೊಗೊಂಡು ಏನು ಮಾಡುತ್ತಿ ಎಂಬಂತೆ ಹುಬ್ಬೇರಿಸಿದಳು. ಆಮೇಲೆ ನೋಡೋಣ ಎಂದೆ.

ಸರಿ, ಹಣ್ಣನ್ನು ಮನೆಗೆ ತಂದಾಯಿತು. ಮುಂದೇನು? ಅರ್ಧ ಭಾಗವಾಗಿ ಹೆಚ್ಚಿದೆ. ಹೆಚ್ಚುತ್ತಿದ್ದಂತೆಯೇ ಮನೆಯ ತುಂಬ ನಿಂಬೆಯ ಅದ್ಭುತ ಪರಿಮಳವಂತೂ ಹರಡಿತು. ಈ ಹಣ್ಣಿಗೆ ತೊಳೆ ತಿರುಳುಗಳಾಗಲೀ ರಸವಾಗಲೀ ಇರುವುದಿಲ್ಲವೆಂದು ಓದಿದ್ದರಿಂದ ಅದನ್ನು ಹೆಚ್ಚಿದಾಗ ನಿರಾಶೆಯಾಗಲಿಲ್ಲ. ಕಿತ್ತಳೆ ಹಣ್ಣನ್ನು ಸುಲಿದಾಗ ಸಿಪ್ಪೆಯ ಕೆಳಗೆ ಬಿಳಿಯ ಬೆಂಡಿನಂತಹ ಭಾಗವಿರುತ್ತದೆ ತಾನೇ? ಬುದ್ಧನ ಕೈಯ ಒಳಭಾಗದಲ್ಲಾದರೋ ಸಂಪೂರ್ಣವಾಗಿ ಈ ರೀತಿಯ ಬೆಂಡು ಮಾತ್ರವೇ ಇತ್ತು. ಇದರ ಸಿಪ್ಪೆ ರುಚಿ ನೋಡಿದೆ. ಕಿತ್ತಳೆ ಅಥವಾ ನಿಂಬೆ ಸಿಪ್ಪೆಗಳಂತೆ ಹೆಚ್ಚು ಕಹಿ ಇರಲಿಲ್ಲ. ಬೆಂಡಿನ ಭಾಗ ಸಿಹಿ ಎಂದೇ ಹೇಳಬಹುದು. ಈ ಭಾಗದಲ್ಲಿ ಪೆಕ್ಟಿನ್ ಅತ್ಯಧಿಕ ಪ್ರಮಾಣದಲ್ಲಿ ಇರುತ್ತದಂತೆ. ಜಾಮ್, ಮಾರ್ಮಲೇಡ್ ಮುಂತಾದವುಗಳು ಜೆಲ್ಲಿಯಂತೆ ಗಟ್ಟಿಯಾಗಲು ಬಹಳ ಅವಶ್ಯಕವಾದ ಪದಾರ್ಥ ಇದು.



ಹಣ್ಣನ್ನೇನೋ ಹೆಚ್ಚಿಯಾಯಿತು. ಮುಂದೇನು? ಯೂಟ್ಯೂಬಿನಲ್ಲಿ ಹಲವಾರು ರೆಸಿಪಿಗಳು ದೊರೆತವು. ಅವುಗಳ ಪೈಕಿ ಮಾರ್ಮಲೇಡ್ ಒಂದು. ಕಿತ್ತಳೆ ಹಣ್ಣಿನ ಮಾರ್ಮಲೇಡ್ ತಯಾರಿಸುವ ಅನುಭವ ತಕ್ಕಮಟ್ಟಿಗೆ ಇದ್ದುದರಿಂದ, ಇದರಿಂದಲೂ ಅದನ್ನೇ ತಯಾರಿಸಲು ತೀರ್ಮಾನಿಸಿದೆ. ಕತ್ತರಿಸಿದ 'ಬುದ್ಧನ ಕೈ'ಯ ಅರ್ಧ ಭಾಗವನ್ನು ಮಾತ್ರ ಸಣ್ಣ ಹೋಳುಗಳನ್ನಾಗಿ ತುಂಡರಿಸಿ (ಅಹಿಂಸಾವಾದಿ ಬುದ್ಧ ನನ್ನನ್ನು ಕ್ಷಮಿಸುತ್ತಾನೆ ಎಂದುಕೊಂಡಿದ್ದೇನೆ) ಮಾರ್ಮಲೇಡ್ ತಯಾರಿಸಿದೆ. ನಿಂಬೆಯ ಪರಿಮಳ ಮೂಗಿಗೆ ಹೊಡೆಯುವಂತಿದ್ದು, ಬಣ್ಣ ಸೊಗಸಾಗಿತ್ತು. ರುಚಿಯೂ ಅದ್ಭುತವಾಗಿದೆ ಎಂಬ ಸರ್ಟಿಫಿಕೇಟ್ ಸಹ ಸಿಕ್ಕಿತು. ಸಾಧನೆ ಮಾಡಿದ ತೃಪ್ತಿ ನನಗೆ. ಕುತೂಹಲ ಅರ್ಧವಾದರೂ ತಣಿಯಿತು.

ಸರಿ, ಹಣ್ಣಿನ ಉಳಿದ ಅರ್ಧದಲ್ಲಿ ಏನು ಮಾಡಬೇಕು? ಕಿತ್ತಳೆ ಸಿಪ್ಪೆಯ ಗೊಜ್ಜು ಸವಿದ ಕನ್ನಡ ನಾಲಗೆ ಸುಮ್ಮನಿರುತ್ತದೆಯೇ? ಯಾಕೆ ಪ್ರಯತ್ನಿಸಬಾರದು ಅನಿಸಿತು. ಸರಿ, ಗೊಜ್ಜನ್ನೂ ಮಾಡಿದೆ. ಇದೂ ಅಷ್ಟೇ. ಬಹಳ ರುಚಿಯಾಗಿತ್ತು.

'ಬುದ್ಧನ ಕೈ'ಯನ್ನು ಬಳಸುವ ಬಗ್ಗೆ ಮತ್ತಿತರ ಮಾಹಿತಿಗಳನ್ನು ಹುಡುಕಿಕೊಂಡೆ. ಈ ಹಣ್ಣನ್ನು ಸಣ್ಣ ಸಣ್ಣ ಹೋಳುಗಳನ್ನಾಗಿ ಮಾಡಿ ಸಕ್ಕರೆ ಸೇರಿಸಿ ಕ್ಯಾಂಡಿಗಳನ್ನು ತಯಾರಿಸಿ ಕೇಕ್ ಮಾಡುವಲ್ಲಿ ಬಳಸುತ್ತಾರೆ. ಕೇಕ್ ಮೇಲಿನ ಐಸಿಂಗ್ ಮಾಡುವಾಗ ಕ್ರೀಮ್‌ಗೆ ಸೇರಿಸುತ್ತಾರೆ. ಹಣ್ಣಿನ ಸಿಪ್ಪೆಯನ್ನು ಆಲ್ಕೊಹಾಲ್ ಮತ್ತಿತರ ಪಾನೀಯಗಳಲ್ಲಿ ನೆನೆಸಿಟ್ಟರೆ ಸಿಪ್ಪೆಯಲ್ಲಿರುವ ತೈಲಗಳು ಊರಿಕೊಂಡು ಈ ಪಾನೀಯಗಳಿಗೆ ತಾಜಾ ನಿಂಬೆಯ ಪರಿಮಳ ಬೆರೆತುಕೊಳ್ಳುತ್ತದಂತೆ. ಅಷ್ಟೇ ಅಲ್ಲ ಅದರ ತೆಳು ಪದರವನ್ನಾಗಲೀ 'ಬೆರಳ'ನ್ನಾಗಲೀ ನೀರಿನ ಲೋಟದಲ್ಲಿ ಮುಳುಗಿಸಿಟ್ಟರೂ ಆಯಿತು, ಅದು ಆಹ್ಲಾದಕರ ಪಾನೀಯವಾಗುತ್ತದೆ.

ಬುದ್ಧನ ಕೈ ಬಗ್ಗೆ ನನಗಿದ್ದ ಕುತೂಹಲವೇನೋ ತಣಿಯಿತು. ಆದರೆ, ಮತ್ತೊಮ್ಮೆ ತಂದು ನನ್ನದೇ ಪ್ರಯೋಗಗಳನ್ನು ಮಾಡಲೇ ಎಂಬ ಆಲೋಚನೆ ಇಣುಕು ಹಾಕುತ್ತಿದೆ. ■

# ಮಕ್ಕಳು ಓದುವಂತೆ ಮಾಡುವುದು ಹೇಗೆ?

■ ಭವ್ಯ ಟಿ.ಎಸ್.

ಶಿಕ್ಷಣ

ಪ್ರತಿ ವಿದ್ಯಾರ್ಥಿಯು ಸ್ಪಷ್ಟವಾಗಿ ಓದಬೇಕು, ಬರೆಯಬೇಕು, ಮಾತನಾಡಬೇಕು ಎಂಬುದು ಎಲ್ಲಾ ಶಿಕ್ಷಕರ ಆಶಯ. ಪ್ರಾಥಮಿಕ ಹಂತದಲ್ಲಿ ಅಕ್ಷರಗಳನ್ನು ಕಲಿತು ಹಂತಹಂತವಾಗಿ ಕಾಗುಣಿತ, ಸರಳ ಪದಗಳು, ಒತ್ತಕ್ಷರಗಳಿಂದ ಕೂಡಿದ ಪದಗಳನ್ನು ಮಗು ಪರಿಚಯಿಸಿಕೊಳ್ಳುತ್ತಾ ಸಾಗುತ್ತದೆ. ಈ ಮೂಲಹಂತಗಳನ್ನು ಸರಿಯಾದ ರೀತಿಯಲ್ಲಿ ಸಾಧಿಸಿದ ಮಗು ಓದು ಬರಹದ ಯಾವುದೇ ಸಮಸ್ಯೆಯನ್ನು ಎದುರಿಸದೆ ಪುಸ್ತಕಗಳು, ದಿನಪತ್ರಿಕೆಗಳನ್ನು ಓದಲು ಪ್ರಾರಂಭಿಸುತ್ತದೆ.

ಹೊಸ ಹೊಸ ಪದಗಳ ಅರ್ಥವನ್ನು ಕುತೂಹಲದಿಂದ ಗ್ರಹಿಸುತ್ತಾ ಭಾಷಾ ಸಾಮರ್ಥ್ಯವನ್ನು ಬಲಗೊಳಿಸಿಕೊಳ್ಳುತ್ತದೆ. ಆದರೆ ಮಗು ತಾನಾಗಿಯೇ ಈ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಇದಕ್ಕೆ ಶಿಕ್ಷಕರ ಮತ್ತು ಪೋಷಕರ ಪ್ರೇರಣೆ ಅತ್ಯಗತ್ಯ. ಮಗುವನ್ನು ಓದಿನೆಡೆಗೆ ಪ್ರೇರೇಪಿಸಲು ಏನೆಲ್ಲಾ ಮಾಡಬಹುದು ಎಂಬುದಕ್ಕೆ ಕೆಲವು ಸಲಹೆಗಳು ಇಲ್ಲಿವೆ.



- ಮನೆ ಮತ್ತು ಶಾಲೆಯಲ್ಲಿ ಮಗುವಿಗೆ ಇಷ್ಟವಾಗುವಂಥ ಪುಸ್ತಕ, ಪತ್ರಿಕೆಗಳನ್ನು ಮಗುವಿಗೆ ಲಭ್ಯವಾಗುವಂತೆ ಇಡಬೇಕು. ಪ್ರತಿದಿನ ಒಂದು ಹೊಸ ವಿಷಯವನ್ನು ಶಿಕ್ಷಕರು, ಪೋಷಕರು ಮಕ್ಕಳ ಮುಂದೆ ಓದಿ ಹೇಳಬೇಕು. ಆಗ ಮಗುವಿಗೆ ಈ ಪುಸ್ತಕವನ್ನು ಓದಬೇಕೆಂಬ ಕೌತುಕ ಮೂಡುತ್ತದೆ. ನಿಧಾನವಾಗಿ ಪುಟಗಳನ್ನು ತಿರುವಿ ಹಾಕುತ್ತದೆ. ಇಲ್ಲಿಂದಲೇ ಓದಿನ ರುಚಿ ಮಗುವಿನ ಮನಕ್ಕೆ ಹತ್ತಲು ಪ್ರಾರಂಭಿಸುತ್ತದೆ.
- ಪ್ರತಿ ಶಾಲೆಯಲ್ಲಿ ಗ್ರಂಥಾಲಯವಿರುತ್ತದೆ. ಅಲ್ಲಿನ ಕಪಾಟುಗಳಿಗೆ ಬೀಗ ಹಾಕಿ ಭದ್ರವಾಗಿಡುವುದು ತಪ್ಪು. ಮಗುವಿನ ಕೈಗೆ ಪುಸ್ತಕ ಎಟುಕದ ಹೊರತು ಓದಿನ ಅಭಿರುಚಿ ಬೆಳೆಸಲು ಸಾಧ್ಯವೇ ಇಲ್ಲ.
- ಮಗುವಿನ ವಯಸ್ಸಿಗೆ ತಕ್ಕಂತೆ ಆಯಾ ಶಾಲೆಗಳಲ್ಲಿ ಪುಸ್ತಕಗಳನ್ನು ತರಿಸಬೇಕು. ಆಕರ್ಷಕ ಮುಖಪುಟ, ಚಿತ್ರಸಹಿತ ವಿವರಣೆ, ಬಣ್ಣಬಣ್ಣದ ಅಕ್ಷರಗಳಿದ್ದರೆ ಪ್ರಾಥಮಿಕ ಹಂತದ ಮಕ್ಕಳು ಇಷ್ಟಪಡುತ್ತಾರೆ. ಮೊದಲ ಹಂತದಲ್ಲಿ ಪುಟ್ಟ ಪುಟ್ಟ ಕತೆಗಳಿರುವ ಪುಸ್ತಕಗಳಿದ್ದರೆ ನಿರೀಕ್ಷಿತ ಫಲ ಸಾಧಿಸಬಹುದು. ಪ್ರೌಢಶಾಲೆಗಳಲ್ಲಿ ಸಾಧಕರ ಜೀವನ ಚರಿತ್ರೆ, ನಾಡುನುಡಿಗೆ ಸಂಬಂಧಿಸಿದ ಮಾಹಿತಿ, ವ್ಯಕ್ತಿತ್ವ ವಿಕಸನ, ವಿಜ್ಞಾನ, ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳ ಕುರಿತ ಪುಸ್ತಕಗಳಿದ್ದರೆ ಆಸಕ್ತಿದಾಯಕವೆನಿಸುತ್ತದೆ.
- ಪ್ರಾರ್ಥನಾ ಸಮಯದಲ್ಲಿ ದಿನಪತ್ರಿಕೆಗಳ ಪ್ರಮುಖಾಂಶಗಳನ್ನು ಓದಿಸುವುದರಿಂದ ರಾಜ್ಯ, ದೇಶ, ವಿದೇಶಗಳ ಸುದ್ದಿ ಸಮಾಚಾರಗಳನ್ನು ಮಕ್ಕಳು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಓದುವ ಮತ್ತು ಗಮನವಿಟ್ಟು ಆಲಿಸುವ ಸಾಮರ್ಥ್ಯ ವೃದ್ಧಿಯಾಗುತ್ತದೆ. ಮಕ್ಕಳಿಗೆ ಗ್ರಂಥಾಲಯದ ಪುಸ್ತಕಗಳನ್ನು ಕೊಟ್ಟ ನಂತರ ಪ್ರತಿ ಮಗುವು ತಾನು ಓದಿದ ಪುಸ್ತಕದ ಬಗ್ಗೆ ಮಾತನಾಡುವ ಚಟುವಟಿಕೆ ಮಾಡಿಸಬೇಕು. ಇದರಿಂದ ಮಗುವಿನ ಗ್ರಹಿಕೆಯ ಶಕ್ತಿ ಹೆಚ್ಚುತ್ತದೆ. ಉತ್ತಮ ಮಾತುಗಾರಿಕೆಯೂ ಕರಗತವಾಗುತ್ತದೆ.
- ಪ್ರೌಢಶಾಲಾ ಹಂತದಲ್ಲಿ ಮಗು ಶಬ್ದಕೋಶವನ್ನು ಬಳಸಲು ಪ್ರೋತ್ಸಾಹಿಸಬೇಕು. ಒಂದು ಆಟದಂತೆ ಮನರಂಜನೆ ನೀಡುವುದರ ಜೊತೆಗೆ ಮಗುವಿಗೆ ಯಥೇಚ್ಛ ಪದಗಳ ಪರಿಚಯವಾಗುತ್ತದೆ. ಪತ್ರಿಕೆಗಳಲ್ಲಿ ಬರುವ ಪದಬಂಧಗಳನ್ನು ರಚಿಸಲು ಪ್ರೋತ್ಸಾಹಿಸಬೇಕು. ಹೀಗೆ ಸಾಗುವ ಪುಟ್ಟ ಪುಟ್ಟ ಹೆಜ್ಜೆಗಳೇ ಮುಂದೆ ಮಗುವಿನ ಭಾಷಾಲೋಕ ಸುಂದರವಾಗಿ ರೂಪುಗೊಳ್ಳಲು, ಜೀವನದಲ್ಲಿ ಯಶಸ್ವಿಯಾಗಲು ಮೆಟ್ಟಿಲುಗಳಾಗುತ್ತವೆ. ಪೋಷಕರು ಹಾಗೂ ಶಿಕ್ಷಕರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗೋಣ. ■